# ಸಿಡ್ನಿ ಕನ್ನಡ ಸಂಘದ ೪೨ನೇ ವಾರ್ಷಿಕೋತ್ಸವ ಆಚರಣೆಯಲ್ಲಿ "ಸಂಕೇತ" ನಾಟಕ "ಕಾಂತ ಮತ್ತು ಕಾಂತ" ಯಶಸ್ವೀ ಪ್ರದರ್ಶನ.

ಸಿಡ್ನಿ ಕನ್ನಡ ಸಂಘವು ತನ್ನ ೪೨ನೇ ವಾರ್ಷಿಕೋತ್ಸವವನ್ನು ಈ ವರ್ಷ ವಿಶಿಷ್ಠ ವೈಖರಿಯಲ್ಲಿ ಆಚರಿಸಿತು.

ಮೇ ೨೪ರ ಶನಿವಾರ ಸಂಜೆ ಸಿಡ್ನಿಯ ಎರ್ಮಿಂಗ್ಟನ್ ಸಮುದಾಯ ಭವನದಲ್ಲಿ ಜರುಗಿದ ಕಾರ್ಯಕ್ರಮದ ಅಂಗವಾಗಿ ಒಂದು ನಾಟಕದ ಪ್ರದರ್ಶನವನ್ನು ಆಯೋಜಿಸಲಾಗಿತ್ತು.




ಕನ್ನಡ ಚಿತ್ರರಂಗದ ಜನಪ್ರಿಯ ನಟ ದಿ. ಶಂಕರ ನಾಗ್ ಅವರು ಪ್ರಾರಂಭಿಸಿದ್ದ "ಸಂಕೇತ್" ನಾಟಕರವರ "ಕಾಂತ ಮತ್ತು ಕಾಂತ" ನಾಟಕವನ್ನು ಸಿಡ್ನಿ ಕನ್ನಡ ಸಂಘದ ಆಶ್ರಯದಲ್ಲಿ ಕನ್ನಡಾಭಿಮಾನಿಗಳಿಗಾಗಿ ಏರ್ಪಡಿಸಲಾಗಿತ್ತು.



ಸಾಂಪ್ರದಾಯಿಕ ದಿವ್ಯ ಜ್ಯೋತಿಯನ್ನು ಬೆಳಗಿಸುವ ಮೂಲಕ ಕಾರ್ಯಕ್ರಮ ಪ್ರಾರಂಭವಾಯಿತು. ಸಂಘದ ಅಧ್ಯಕ್ಷೆ ಶ್ರೀಮತಿ.ನಂದಾ ಶಿರೋಳ್, ಅತಿಥಿಗಳಾದ ಶ್ರೀಮತಿ. ಪದ್ಮಾ ಮುಖ್ಯಮಂತ್ರಿ ಚಂದ್ರು, ಡಾ. ಮುದ್ದಪ್ಪ ಪ್ರಭು, ಡಾ. ವಿನಯ್ ಹಲಸಗಿ, ಸಂಘದ ಟ್ರಸ್ಟೀ ಮತ್ತು ಸಲಹೆಗಾರರುಗಳಾದ ಶ್ರಿ. ಓಂಕಾರಸ್ವಾಮಿ ಗೊಪ್ಪೇನಹಳ್ಳಿ, ಶ್ರೀ.ಸ್ಯಾಮ್ ಗೋಪಿನಾಥ್ ಮತ್ತು ಸಂಘದ ನಿಕಟಪೂರ್ವ ಅಧ್ಯಕ್ಷರಾದ ಶ್ರೀ.ವಿಜಯಕುಮಾರ್ ಹಲಗಲಿಯವರು ಜ್ಯೋತಿಯನ್ನ ಬೆಳಗಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.





ಈ ನಾಟಕದ ಮುಖ್ಯಪಾತ್ರಗಳಲ್ಲಿ ಅಭಿನಯಿಸಲು ಬೆಂಗಳೂರಿನಿಂದ ಕನ್ನಡ ರಂಗಭೂಮಿ, ಚಲನಚಿತ್ರ ಮತ್ತು ಕಿರುತೆರೆಯಲ್ಲಿ ತಮ್ಮ ಅಮೋಘ ಅಭಿನಯದಿಂದ ಕನ್ನಡಿಗರ ಮನದಲ್ಲಿ ಮನೆಮಾಡಿರುವ ಹಾಸ್ಯ ನಟರಾದ ಶ್ರೀ. ಮುಖ್ಯಮಂತ್ರಿ ಚಂದ್ರು ಮತ್ತು ಶ್ರೀ. ಸಿಹಿ ಕಹಿ ಚಂದ್ರು

ರವರುಗಳು ಆಗಮಿಸಿದ್ದರು. ಈ ನಾಟಕದ ರಚನೆಕಾರ ಮತ್ತು ನಿರ್ದೇಶಕರಾದ ಶ್ರೀ. ಸುರೇಂದ್ರನಾಥ್ ಸುಬ್ಬಣ್ಣ ಅವರು ಕೂಡ ಈ ನಾಟಕದಲ್ಲಿ ಪಾತ್ರವಹಿಸಿದ್ದರು.
"ಕಾಂತ ಮತ್ತು ಕಾಂತ' ನಾಟಕವು ರಂಗಭೂಮಿಯ ಇಬ್ಬರು ದಿಗ್ಗಜ ನಟರುಗಳಾದ ಉಮಾಕಾಂತ ಮತ್ತು ರಮಾಕಾಂತ ಅವರುಗಳ ಕಥೆ. ಉಮಾಕಾಂತ ಮತ್ತು ರಮಾಕಾಂತ ರಂಗಭೂಮಿಯ ಮೇರು ನಟರುಗಳಾಗಿ ಹೆಸರುಮಾಡಿದ ನಟದ್ವಯರು. ಗಳಸ್ಯ ಕಂಠಸ್ಯ ಸ್ನೇಹಿತರಾಗಿದ್ದ ಇವರಿಬ್ಬರೂ ಕಾರಣಾಂತರಗಳಿಂದ ತಪ್ಪು ಕಲ್ಪನೆ ಮತ್ತು ಪ್ರತಿಷ್ಠೆಯಿಂದಾಗಿ ದೂರವಾಗಿರುತ್ತಾರೆ. ಈ ಇಬ್ಬರೂ ನಟರುಗಳನ್ನು ಹೇಗಾದರೂ ಮಾಡಿ ಮತ್ತೊಮ್ಮೆ ರಂಗಭೂಮಿಯ ಮೇಲೆ ಒಂದುಗೂಡಿಸಬೇಕೆನ್ನುವ ನಿರ್ದೇಶಕನ ಪ್ರಯತ್ನವೇ ಈ ನಾಟಕದ ತಿರುಳು.
ಉಮಾಕಾಂತ ತಾವಿಬ್ಬರೂ ಮತ್ತೊಮ್ಮೆ ಒಟ್ಟಿಗೆ ಸೇರಿ ನಟಿಸಲು ಅಸಾಧ್ಯವೆಂದು, ಅದಕ್ಕೆ ಕಾರಣ ರಮಾಕಾಂತ ತನ್ನನ್ನು ಕಾರಣವಿಲ್ಲದೇ ದೂರಮಾಡಿದ್ದು ಮತ್ತು ತನ್ನ ಪ್ರಯತ್ನಕ್ಕೆ ಸ್ಪಂದಿಸದೇ ಇದ್ದುದೇ ಕಾರಣವೆಂದು ಹೇಳಿದರೆ, ರಮಾಕಾಂತ ಕೂಡ ಉಮಾಕಾಂತನನ್ನು ಅದೇ ರೀತಿ ದೂರುತ್ತಾನೆ.





ಇಬ್ಬರೂ ನಟರು ಸ್ವಪ್ರತಿಷ್ಠೆ ಮತ್ತು ಸ್ವಾಭಿಮಾನದಿಂದ ಮತ್ತೊಬ್ಬನನ್ನು ದೂರಿದರೂ ತಾವಿಬ್ಬರೂ ಸೇರಿ ಅಭಿನಯಿಸಿದ ನಾಟಕಗಳನ್ನು ನೆನಪಿಸಿಕೊಂಡು ಒಬ್ಬರನ್ನೊಬ್ಬರು ಪ್ರಶಂಸಿವುದಲ್ಲದೇ ಇಬ್ಬರೂ ಸೇರಿ ಅಭಿನಯಿಸಲು ದೊರಕಿದ್ದ ಅವಕಾಶ ತಮ್ಮ ಪುಣ್ಯವೆಂದು ಪರಿಗಣಿಸುತ್ತಾರೆ.
ಇವರಿಬ್ಬರೂ ಮೆಲುಕುಹಾಕುವ ತಾವು ಅಭಿನಯಿಸಿದ್ದ ನಾಟಕಗಳ ದೃಶ್ಯಗಳೇ "ಕಾಂತ ಮತ್ತು ಕಾಂತ" ನಾಟಕದ ಜೀವಾಳ. ಉಮಾಕಾಂತ ಮತ್ತು ರಮಾಕಾಂತ ಅಭಿನಯಿಸಿದ್ದ ನಾಟಕಗಳ ಪ್ರಸಂಗಗಳು ಪ್ರೇಕ್ಷಕರನ್ನು ಮಂತ್ರಮುಗ್ಧಗೊಳಿಸಿದವು. ನೆರೆದಿದ್ದ ಪ್ರೇಕ್ಷಕರು ಹಾಸ್ಯ ಮತ್ತು ಸನ್ನಿವೇಶದ ಗಂಭಿರತೆಯನ್ನು ಅನುಭವಿಸಿದರು.
ಮತ್ತೊಮ್ಮೆ ಅಭಿನಯಿಸುವ ಅವಕಾಶ ಸಿಕ್ಕರೆ ಅದಕ್ಕಿಂತ ಬೇರೆನೂ ಬೇಕಿಲ್ಲವೆಂದು ತಮ್ಮ ಸುಪ್ತ ಮನಸ್ಸಿನ ಬಯಕೆಯನ್ನು ನಿರ್ದೇಶಕನ ಎದುರು ತೋಡಿಕೊಳ್ಳುತ್ತಾರೆ ಆದರೆ ಒಟ್ಟಿಗೆ ಮತ್ತೋಮ್ಮೆ ಅಭಿನಯಿಸುವುದು ಅಸಾಧ್ಯವೆಂದು ಹೇಳುತ್ತಾರೆ.
ಈ ಇಬ್ಬರೂ ನಟರನ್ನು ಮತ್ತೊಮ್ಮೆ ರಂಗಭೂಮಿಯ ಮೇಲೆ ಒಟ್ಟುಗೂಡಿಸುವ ಪಣತೊಟ್ಟಿದ್ದ ನಿರ್ದೇಶಕ, ಇಬ್ಬರಿಗೂ ಮತ್ತೊಬ್ಬ ಅಭಿನಯಿಸಲು ಉತ್ಸುಕನಾಗಿರುವುದಾಗಿ ಹೇಳಿ, ಅವರಿಬ್ಬರೂ ಒಂದೆಡೆ ಸೇರಿ ನಾಟಕದ ರಿಹರ್ಸಲ್ ಮಾಡಲು ಒಪ್ಪಿಸುತ್ತಾನೆ.

ರಮಾಕಾಂತ ಮತ್ತು ಉಮಾಕಾಂತ ಇಬ್ಬರೂ ಅನೇಕ ವರ್ಷಗಳ ನಂತರ ಭೇಟಿಯಾದ ಕಾರಣ ಸ್ವಲ್ಪ ಬಿಗುಮಾನ, ಸ್ವಲ್ಪ ಆತ್ಮೀಯತೆಯಿಂದ ನಾಟಕದ ದೃಶ್ಯದ ಪೂರ್ವಾಭ್ಯಾಸ ಆರಂಭಿಸುತ್ತಾರೆ. ಹಿಂದಿನಂತೆ ಅತ್ಯಂತ ಸ್ನೇಹದಿಂದ ಉಮಾಕಾಂತ ರಮಾಕಾಂತನೊಂದಿಗೆ ನಟಿಸುತ್ತಿರುವಾಗಲೇ ರಮಾಕಾಂತ ಹೃದಯಸ್ಥಂಭನದಿಂದ ಮೃತನಾಗುತ್ತಾನೆ. ಹೀಗೆ ರಂಗಭೂಮಿಯ ಮೇರು ನಟರುಗಳಿಬ್ಬರೂ ತಪ್ಪು ಕಲ್ಪನೆಯಿಂದಾಗಿ ದೂರವಾಗಿ ಮತ್ತೆ ಹಲವು ವರ್ಷಗಳ ನಂತರ ಒಟ್ಟಿಗೆ ಅಭಿನಯಿಸುವ ಅಭಿಲಾಷೆಯಿಂದ ಒಂದಾಗುವ ಅವಕಾಶದಿಂದ ವಂಚಿತರಾಗುವ ಕಥೆ, ಹಾಸ್ಯ, ಗಾಂಭೀರ್ಯತೆ ಮತ್ತು ಹತಾಶೆಯ ಮನೊಭಾವನೆಗಳಿಂದ ಮೇಳೈಸಿದ "ಕಾಂತ ಮತ್ತು ಕಾಂತ" ನಾಟಕವು ಸಿಡ್ನಿಯ ಕನ್ನಡಾಭಿಮಾನಿಗಳನ್ನು ಮನರಂಜಿಸುವಲ್ಲಿ ಯಶಸ್ವೀಯಾಯಿತು.





ಕಾರ್ಯಕ್ರಮದ ನಿರೂಪಣೆಯನ್ನು ಶ್ರೀ. ಮಹಾಂತೇಶ್ ಗದ್ದಿ ಮತ್ತು ಶ್ರೀ. ಭಾಸ್ಕರ್ ಬಿ. ವಿ. ಅವರು ಮಾಡಿದರು. ಜ್ಯೋತಿಯನ್ನು ಬೆಳಗುವ ವೇಳೆಗೆ "ಹಚ್ಚೇವು ಕನ್ನಡದ ದೀಪ" ಗೀತೆ ಮತ್ತು "ಜಯ ಭಾರತ ಜನನಿಯ ತನುಜಾತೆ" ಕರ್ನಾಟಕದ ನಾಡಗೀತೆಯನ್ನು ಸಂಘದ ಉಪಾಧ್ಯಕ್ಷೆ, ಶ್ರೀಮತಿ. ಭಾಗ್ಯ ಶಂಕರ್, ಶ್ರೀಮತಿ. ಗೀತಾ ಗೋಪಿನಾಥ್, ಶ್ರೀಮತಿ. ವೇದಾ ದೆಸಾಯಿ, ಶ್ರೀ. ಭಾಸ್ಕರ ಮತ್ತು ಶ್ರೀ. ಮಹಾಂತೇಶ್ ಗದ್ದಿ ಅವರುಗಳು ಪ್ರಸ್ತುತಪಡಿಸಿದರು. ಶ್ರೀಮತಿ. ಭಾಗ್ಯ ಶಂಕರ್ ಅವರು ಕಾರ್ಯಕ್ರಮದ ಯಶಸ್ಸಿಗೆ ಧನ ಸಹಾಯ ಮಾಡಿದ ಪ್ರಾಯೋಜಕರುಗಳು, ಸ್ವಯಂಸೇವಕರು ಮತ್ತು ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಪ್ರೋತ್ಸಾಹ ನೀಡಿದ ಎಲ್ಲರಿಗೂ ವಂದನೆಗಳನ್ನು ಅರ್ಪಿಸಿದರು.

ಸಿಡ್ನಿ ಕನ್ನಡ ಸಂಘವು ತನ್ನ ೪೨ನೇ ವಾರ್ಷಿಕೋತ್ಸವದ ಅಂಗವಾಗಿ ಆಯೋಜಿಸಿದ್ದ "ಕಾಂತ ಮತ್ತು ಕಾಂತ" ನಾಟಕದ ಪ್ರದರ್ಶನವು ಕಿಕ್ಕಿರಿದ ಜನಸಂದಣಿಯೊಂದಿಗೆ ಯಶಸ್ವೀಯಾಗಿ ಕೊನೆಗೊಂಡಿತು.

ವರದಿ: ವಿಜಯಕುಮಾರ್ ಹಲಗಲಿ
ಚಿತ್ರಗಳು: ವಾದಿರಾಜ್ ರಾವ್

